ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 205 ವೆಚ್ಚ-12/2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 26-04-2021.

## ಸುತ್ತೋಲೆ

ವಿಷಯ: ನಿರ್ಮಾಣ ಕಾಮಗಾರಿಗಳು, ಸಾಮಗ್ರಿಗಳು ಮತ್ತು ಉಪಕರಣಗಳ ಗುತ್ತಿಗೆಗಳಲ್ಲಿ ಮೂರನೆ ಪಕ್ಷಕಾರರಿಂದ ತಪಾಸಣೆ (Third Party Inspection) ಮಾಡಿಸುವ ಕುರಿತಾದ ಅಂದಾಜು ವೆಚ್ಚದ ಮಿತಿಯನ್ನು ಹೆಚ್ಚಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: FD 55 Pro.Cell 2004 Dated: 17-02-2005.

********

ರಾಜ್ಯದ ಸಂಗ್ರಹಣಾ ಪ್ರಾಧಿಕಾರಗಳು ಸಂಗ್ರಹಿಸುವ ನಿರ್ಮಾಣ ಕಾಮಗಾರಿಗಳು, ಸಾಮಗ್ರಿ ಮತ್ತು ಉಪಕರಣಗಳ ಗುತ್ತಿಗೆಯಲ್ಲಿ ಮೂರನೆ ಪಕ್ಷಕಾರರಿಂದ (Third Party) ತಪಾಸಣೆ ಮಾಡಿಸುವ ಕುರಿತು ಉಲ್ಲೇಖದ ಸರ್ಕಾರದ ಆದೇಶದಲ್ಲಿ ವಿವರವಾದ ಸೂಚನೆಗಳನ್ನು ನೀಡಲಾಗಿರುತ್ತದೆ. ಅದರಂತೆ ರೂ.2.00 ಕೋಟಿ ಅಂದಾಜು ವೆಚ್ಚ ಮೀರಿದ ನಿರ್ಮಾಣ ಕಾಮಗಾರಿಗಳು ಹಾಗೂ ಸಾಮಗ್ರಿ ಮತ್ತು ಉಪಕರಣದ ಪ್ರತೀ ಐಟಂ (an item of goods and equipment)ನ ಅಂದಾಜು ವೆಚ್ಚವು ರೂ.25.00 ಲಕ್ಷ ಮೀರಿದ ಸರಕು ಮತ್ತು ಉಪಕರಣಗಳ ಗುತ್ತಿಗೆಯಲ್ಲಿ ಮೂರನೆ ಪಕ್ಷಕಾರರ ತಪಾಸಣೆಯನ್ನು ಕಡ್ಡಾಯಗೊಳಿಸಲಾಗಿರುತ್ತದೆ.

ಸದರಿ ಆದೇಶದಲ್ಲಿನ ಸರಕು ಮತ್ತು ಉಪಕರಣಗಳ ಸಂಬಂಧದ ಅಂದಾಜು ವೆಚ್ಚದ ಮಿತಿಯನ್ನು ಪರಿಷ್ಕರಿಸುವಂತೆ ರಾಜ್ಯದ ಹಲವಾರು ಸಂಗ್ರಹಣಾ ಪ್ರಾಧಿಕಾರಗಳಿಂದ ಕೋರಿಕೆ ಸಲ್ಲಿಸಲಾಗಿರುತ್ತದೆ. ಇವುಗಳನ್ನು ಪರಿಶೀಲಿಸಲಾಗಿದ್ದು, ಸಾಮಗ್ರಿ ಮತ್ತು ಉಪಕರಣಗಳ ಗುತ್ತಿಗೆಗೆ ಸಂಬಂಧಿಸಿದಂತೆ ಈಗಿರುವ ಸಾಮಗ್ರಿ ಮತ್ತು ಉಪಕರಣದ ಪ್ರತಿ ಐಟಂನ ಅಂದಾಜು ವೆಚ್ಚವನ್ನು ರೂ.25.00 ಲಕ್ಷಗಳಿಂದ ರೂ.50.00 ಲಕ್ಷಗಳಿಗೆ ಪರಿಷ್ಕರಿಸಲಾಗಿದೆ. ಅದರಂತೆ ಪರಿಷ್ಕೃತ ಮಿತಿಯನ್ನು ಟೆಂಡರ್ ದಾಖಲೆಗಳ ವಿಶೇಷ ಷರತ್ತುಗಳಲ್ಲಿ ಅಳವಡಿಸಲು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಕ್ರಮವಹಿಸತಕ್ಕದ್ದು.

(ಕೆ.ಗಾಯಿತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)(ಪ್ರ)

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು

ಪ್ರತಿ:

1. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
3. ಮಹಾಲೇಖಾಪಾಲರು (ಎ&ಇ), ಕರ್ನಾಟಕ ಸರ್ಕಾರ, ಬೆಂಗಳೂರು
4. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಹಾಗೂ ಕರ್ನಾಟಕ ವಿಧಾನ ಪರಿಷತ್ತು
5. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
6. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
7. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು
8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
9. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್
10. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು
11. ರಾಜ್ಯದ ಎಲ್ಲಾ ನಿಗಮ ಮತ್ತು ಮಂಡಳಿಗಳ ಕಾರ್ಯನಿರ್ವಾಹಣಾಧಿಕಾರಿಗಳು
12. ಆಂತರಿಕ ಆರ್ಥಿಕ ಸಲಹೆಗಾರರು
13. ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ವಿಶೇಷಾಧಿಕಾರಿಗಳು/ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
14. ಶಾಖೆಯ ರಕ್ಷ ಕಡತ/ಹೆಚ್ಚುವರಿ ಪ್ರತಿ.